ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 5, March-April, 2024, Pp. 77-81.
©*IIMRD*, Mysuru
IIMRD JOURNALS
www.iimrd.com

# ಡಾ. ಬಿ.ಆರ್. ಅಂಬೇಡ್ಕರ್‌ರವರ ದೃಷ್ಟಿಯಲ್ಲಿ ಸಾಮಾಜಿಕ ಸಮಾನತೆ

**ಡಾ. ರವಿ ಪಿ.**
ಸಮಾಜಶಾಸ್ತ್ರ ಉಪನ್ಯಾಸಕರು, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ಸಾರಾಂಶ: (Abstract)**

*ಸಂವಿಧಾನವು ದೀನ ದಲಿತರ ಹಾಗೂ ನಿರ್ಗತಿಕ ಜನರ ಬಾಳಿಗೆ ದಾರಿ ದೀಪವೆನಿಸಿದೆ. ಸಂವಿಧಾನವು ಪ್ರಸ್ತುತ ಸಮಾಜದಲ್ಲಿನ ದೀನದಲಿತರನ್ನೊಳಗೊಂಡಂತೆ ಸಮಗ್ರ ಭಾರತದ ಅಭಿವೃದ್ಧಿಗೆ ಅವಕಾಶಗಳನ್ನು ಕಲ್ಪಿಸಿದೆ. ಭಾರತೀಯ ಸಮಾಜದಲ್ಲಿರುವ ಎಲ್ಲಾ ರೀತಿಯ ಸಾಮಾಜಿಕ ಏರಿಳಿತಗಳಿಗೂ ರಾಜಕೀಯ ಪ್ರಜಾಪ್ರಭುತ್ವವೊಂದೇ ಪೂರಕವಾಗುತ್ತದೆ ಎಂದು ಅಂಬೇಡ್ಕರ್ ಎಂದೂ ಭಾವಿಸಿರಲಿಲ್ಲ. ದೀನ ದಲಿತರು ಹಾಗೂ ಹಿಂದುಳಿದ ಸಮುದಾಯಗಳ ಸಾಮಾಜಿಕ ಶೈಕ್ಷಣಿಕ ಮತ್ತು ರಾಜಕೀಯ ಕ್ಷೇತ್ರಗಳ ಅಭಿವೃದ್ಧಿಗೆ ಸಂವಿಧಾನಾತ್ಮಕ ಸವಲತ್ತುಗಳನ್ನು ನೀಡಿದ್ದರೂ ಪೂರ್ಣವಾಗಿ ಜಾರಿಯಾಗದ ಕಾರಣ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಇಂದಿಗೂ ಮುಂದುವರೆಯುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರ ದೃಷ್ಟಿಯಲ್ಲಿ ಸಾಮಾಜಿಕ ಸಮಾನತೆ ಕುರಿತು ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** ಭಾರತ ಸಂವಿಧಾನ, ಸಾಮಾಜಿಕ ಸಮಾನತೆ, ಡಾ.ಬಿ.ಆರ್.ಅಂಬೇಡ್ಕರ್.

## ಪೀಠಿಕೆ

ವೈವಿಧ್ಯಮಯ ಸಮಾಜವನ್ನು ಹೊಂದಿರುವ ಭಾರತೀಯ ಸಮಾಜದಲ್ಲಿ ಮೇಲು–ಕೀಳು, ಬಡವ–ಬಲ್ಲಿದ ಮತ್ತು ಜಾತಿ–ಜಾತಿಗಳ ನಡುವಿನ ದ್ವೇಷವನ್ನು ಇಂದಿಗೂ ಕಾಣಬಹುದಾಗಿದೆ. ಇದು ದೇಶದ ಅಭಿವೃದ್ದಿಗೆ ಮಾರಕ ಎಂಬುದನ್ನು ಅರಿತಿದ್ದ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಸಮಾಜದಲ್ಲಿ ಸಮಾನತೆ ಅತ್ಯವಶ್ಯಕ ಎಂದು ಭಾವಿಸಿದ್ದರು. ಈ ಹಿನ್ನೆಲೆಯಲ್ಲಿ ಭಾರತೀಯ ಸಂವಿಧಾನದಲ್ಲಿ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ತತ್ವದ ಆಧಾರದ ಮೇಲೆ ಕಾನೂನುಗಳನ್ನು ರೂಪಿಸಿದರು. ಸ್ವಾತಂತ್ರ್ಯದ ನಂತರ ಸಂವಿಧಾನ ಸಂಪೂರ್ಣವಾಗಿ ಜಾರಿಯಾಗಿದ್ದರೆ ಇಂದಿಗೆ ಭಾರತದ ಅಭಿವೃದ್ಧಿ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲುತಿತ್ತು.

ಪ್ರಸ್ತುತ ಸಮಾಜದಲ್ಲಿ ಪ್ರತಿಯೊಂದು ಸಮುದಾಯದಲ್ಲಿಯೂ ಕೂಡ ಬಡತನ, ಅನಕ್ಷರತೆ, ನಿರುದ್ಯೋಗವನ್ನು ಕಾಣಬಹುದಾಗಿದೆ. ಸಂವಿಧಾನ ಜಾರಿಯಾದ ನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಆದರೆ ಇಂದಿಗೂ ನಿರೀಕ್ಷಿತ ಅಭಿವೃದ್ಧಿ ಸಾಧ್ಯವಾಗಿಲ್ಲ. ಸಮಾಜದಲ್ಲಿ ಶೋಷಣೆಗೊಳಗಾದವರಿಗೆ ಸಂವಿಧಾನವು ಕೆಲವು ರಕ್ಷಣೆಗಳನ್ನು

*Please cite this article as:* ರವಿ ಪಿ. (2024). ಡಾ. ಬಿ.ಆರ್. ಅಂಬೇಡ್ಕರ್‌ರವರ ದೃಷ್ಟಿಯಲ್ಲಿ ಸಾಮಾಜಿಕ ಸಮಾನತೆ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ,* 5(5). ಪು.ಸಂ. 77–81

ನೀಡಿದೆ. ಈ ಸವಲತ್ತುಗಳು ಕೂಡ ಪರಿಪೂರ್ಣವಾಗಿ ಆ ಸಮುದಾಯಗಳಿಗೆ ಸಿಗುತ್ತಿಲ್ಲ. ಸ್ಪೃಶ್ಯ ಸಮುದಾಯಗಳು ಅಸ್ಪೃಶ್ಯ ಸಮುದಾಯಗಳ ಪಟ್ಟಿಯೊಳಗೆ ನುಸುಳಿಕೊಂಡು ನಿಜವಾದ ಶೋಷಿತರಿಗೆ ತಲುಪಬೇಕಿದ್ದ ಸವಲತ್ತುಗಳನ್ನು ಕಸಿದುಕೊಳ್ಳುತ್ತಿವೆ.

ಆರ್ಥಿಕ, ಶೈಕ್ಷಣಿಕ, ರಾಜಕೀಯ, ಹಿಂದುಳಿದಿರುವಿಕೆಯು ಸಾಮಾಜಿಕ ಮತ್ತು ಧಾರ್ಮಿಕ ಅಸಮಾನತೆಗಿಂತ ಭಿನ್ನವಾದದ್ದು. ಅಂದರೆ ಜಾತಿಯ ಕಪಿಮುಷ್ಠಿಯು ಕೆಳಜಾತಿಯ ಜನರ ಬೆಳವಣಿಗೆಗೆ ಮಾರಕವಾಗಿದೆ. ಅಂಬೇಡ್ಕರ್‌ರವರು ದೀನದಲಿತರ ಹಿಂದುಳಿದವರ ಶ್ರೇಯೋಭಿವೃದ್ಧಿಗಾಗಿ ಮೀಸಲಾತಿಯ ಅವಶ್ಯಕತೆಯನ್ನು ಖಚಿತಪಡಿಸಿ ಅದರ ಮೂಲಕ ಆ ಜನರ ಅಭಿವೃದ್ಧಿಗೆ ಸಹಾಯಕ ಎಂದು ನಂಬಿದ್ದರು.

ಭಾರತೀಯ ಸಮಾಜವು ಶ್ರೇಣಿಕೃತ ಜಾತಿ ವ್ಯವಸ್ಥೆಯ ಪ್ರತಿಷ್ಠೆಯ ನೆಲೆಯಲ್ಲಿ ಬೇರೂರಿದೆ. ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಮತ್ತು ನ್ಯಾಯ ನಿರ್ವಾಹಕ ಶಕ್ತಿಗಳು ಮೇಲ್ಮುಖವಾಗಿ ಏರುತ್ತಲೇ ಹೋಗುತ್ತವೆ. ಅಲ್ಲದೆ ಕೆಳಜಾತಿಗಳ ಪ್ರತಿಷ್ಠೆ ನೇರವಾಗಿ ಒಂದು ಮಿತಿಯಲ್ಲಿ ಬರುತ್ತವೆ ಮತ್ತು ಅನರ್ಹತೆಯು ಕೆಳಮುಖವಾಗಿ ಬೆಳೆಯುತ್ತಲೇ ಹೋಗುತ್ತದೆ. ಇಷ್ಟಾದರೂ ಅನರ್ಹತೆ ಅಥವಾ ಕೀಳರಿಮೆಯನ್ನು ಶೂದ್ರ ಇನ್ನಿತರ ಕೆಳಜಾತಿಯ ಜನತೆಯಲ್ಲಿ ಸಣ್ಣ ಪ್ರಮಾಣದಲ್ಲಿ ಇಂದಿಗೂ ಕಾಣಬಹುದು. ಕೆಳಜಾತಿಯವರನ್ನು ಅಸ್ಪಶ್ಯರನ್ನು ಕೀಳುಮಟ್ಟದಿಂದ ಮೇಲಕ್ಕೆ ಎತ್ತುವುದಲ್ಲದೇ ಬಹುಸಂಖ್ಯಾತ ಜನತೆಯೊಂದಿಗೆ ಸಮಾನವಾಗಿ ಸಹಬಾಳ್ವೆಯಿಂದ ಬಾಳುವ ಅವಕಾಶವನ್ನು ಕಲ್ಪಿಸಿಕೊಡಬೇಕೆನ್ನುವುದೇ ಅಂಬೇಡ್ಕರ್‌ರವರ ಕನಸಾಗಿತ್ತು. ಪುರಾತನ ಕಾಲದಿಂದಲೂ ಬಹುಸಂಖ್ಯಾತರೇ ಬಹಳವಾಗಿ ಇರುವುದಲ್ಲದೆ ಶ್ರೇಣಿಕೃತ ಪ್ರಭುತ್ವದ ಹಂತದೊಳಗೆ ಆಂತರಿಕ ಭಿನ್ನತೆಯನ್ನೇನೂ ಕಾಣಲಾಗದು. ಅಂಬೇಡ್ಕರ್‌ರವರ ಚಿಂತನೆಯಿಂದ ಕಂಡುಬರುವ ಸತ್ಯ ಚಿಂತನೆಯೆಂದರೆ ಶೂದ್ರರಲ್ಲಿನ ಏಕತೆ, ಬ್ರಾತೃತ್ವ ಮೂಡಿ, ಮೇಲ್ಜಾತಿಯ ಜನರ ಸರಿ–ಸಮಾನತೆಗೆ ತಲೆ ಎತ್ತಿ ನಿಲ್ಲಬೇಕೆನ್ನುವುದೇ ಅವರ ಆಶಯವಾಗಿತ್ತು.

ಡಾ.ಅಂಬೇಡ್ಕರ್‌ರವರಿಗೆ ಬ್ರಾಹ್ಮಣರ ಬಗ್ಗೆಯಾಗಲಿ, ಬ್ರಾಹ್ಮಣ ಹಿಂದೂ ತತ್ವದ ಬಗ್ಗೆಯಾಗಲೀ ದ್ವೇಷವಿರಲಿಲ್ಲ. ಆದರೆ ಬ್ರಾಹ್ಮಣತ್ವದ ಶ್ರೇಣಿಕೃತ ಪ್ರಭುತ್ವವನ್ನು ಕಟುವಾಗಿ ಟೀಕಿಸುತ್ತಿದ್ದರು. ಬ್ರಾಹ್ಮಣ ಹಿಂದೂವಾದದ ಅಮಾನುಷತ್ವವನ್ನು ಮೇಲು–ಕೀಳೆಂಬ ಭಾವನೆಯನ್ನು ಪ್ರೇರೆಪಿಸಿದೆಯೋ ಅಂತಹ ಪ್ರವೃತ್ತಿಯನ್ನ ದೇವತಾಶಾಸ್ತ್ರ ನಿರೂಪಣೆಯನ್ನು ನಿಷ್ಕಾರಣ್ಯವಾಗಿ ತಿರಸ್ಕರಿಸುತ್ತಾರೆ. ಬ್ರಾಹ್ಮಣ ಸಮಾಜವು ತನ್ನ ಮೂಲಭೂತ ತತ್ವಗಳಾದ ಶುದ್ಧ, ಅಶುದ್ಧ, ಮೇಲು–ಕೀಳು ಮಡಿ ಮೈಲಿಗೆ ಇವುಗಳನ್ನು ಬಿಟ್ಟುಕೊಡಲಾರದು ಎನ್ನುವುದನ್ನು ಚೆನ್ನಾಗಿ ಅರಿತಿದ್ದರು. ಭೌತಿಕವಾಗಿ ಬ್ರಾಹ್ಮಣವರ್ಗ ಯಾವ ಸರ್ವಾಧಿಕಾರವಾದ ಸ್ಥಾನವನ್ನು ಅಲಂಕರಿಸಿದೆಯೋ ಅಂತಹ ಸ್ಥಾನಕ್ಕೆ ಅಸ್ಪೃಶ್ಯರು ಬೆಳೆಯ ಬೇಕಾದರೆ ಕಲಿಯುವುದು ಮತ್ತು ವಿದ್ವತನ್ನು ಬೆಳೆಸಿಕೊಳ್ಳುವುದೊಂದೇ ಮಾರ್ಗ ಎಂದಿದ್ದರು. ಇಷ್ಟೆ ಅಲ್ಲದೇ ಮೀಸಲಾತಿಯ ಮೂಲಕ ಯಾವ ಸದಾವಕಾಶಗಳು ಅನುಭವಗಳು ಹುಟ್ಟಿಕೊಂಡಿದ್ದವೋ ಅಂತವುಗಳನ್ನು ತೆರೆಯಬಹುದಲ್ಲದೇ, ಆರ್ಥಿಕ ಭರವಸೆಯನ್ನು ನೀಡುವುದರ ಮೂಲಕ ಪ್ರಗತಿ ಪಥದತ್ತ ಸಾಗಲು ಪ್ರೋತ್ಸಾಹಿಸಬಹುದೆಂದಿದ್ದರು. ಡಾ.ಅಂಬೇಡ್ಕರ್‌ರವರು ಹಿಂದೂ ಧರ್ಮದ ಸುಧಾರಣೆಯಾಗಬೇಕಾದರೆ, ಹಿಂದೂ ಧರ್ಮದಿಂದ ಜಾತಿ ಮತ್ತು ಅಸ್ಪೃಶ್ಯತೆಯನ್ನು ಹೋಗಲಾಡಿಸಿದರೆ ಮಾತ್ರ ಸಾಧ್ಯವೆಂದು

ವಾದಿಸಿದ್ದರು. ಇದರ ಜೊತೆಗೆ ತತ್ವಧಾರಿತವಾಗಿ ಅಸ್ಪೃಶ್ಯರಲ್ಲಿಯೇ ಸುಧಾರಣೆಯಾಗಬೇಕೆಂದು ಮನಗಂಡಿದ್ದರು.

ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದರೂ ಅದು ಅಲ್ಪಸಂಖ್ಯಾತ ಸ್ವಾತಂತ್ರ್ಯವೇ ಹೊರತು ಬಹುಸಂಖ್ಯಾತ (ಶೂದ್ರರು) ಭಾರತೀಯರಿಗೇನಲ್ಲ ಎಂದು ಅಂಬೇಡ್ಕರ್ ವಾದವನ್ನು ಮಂಡಿಸುತ್ತಿದ್ದರು. ಇದರಿಂದಾಗಿಯೆ ಏನೋ ಒಮ್ಮೆ ಇಂಗ್ಲೆಂಡ್‌ನಲ್ಲಿನ ಸಾರ್ವಜನಿಕ ಸಮಾರಂಭ ಒಂದರಲ್ಲಿ ಗಾಂಧೀಜಿಯವರು ಹೀಗೆ ಉದ್ಗರಿಸಿದ್ದರು. "ಭಾರತದಲ್ಲಿನ ಜಾತಿವ್ಯವಸ್ಥೆಯ ಕಪಿಮುಷ್ಠಿಯು ಶೂದ್ರರ ದೀನ–ದಲಿತರ ಸಮಾನತೆ ಬ್ರಾತೃತ್ವದ ಮಾರಣಹೋಮ ಮಾಡುತ್ತಿರುವುದರಿಂದಾಗಿ ಲಭ್ಯವಾಗುವ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ ಎನ್ನುವ ಅಂಬೇಡ್ಕರ್ ವಾದದ ಎದುರು ನಾನು ತಲೆಬಾಗಿ ನಿಲ್ಲುತ್ತೇನೆ." ಎಂಬ ಮಾತುಗಳು ಅಂಬೇಡ್ಕರ್ ರವರ ವಾಸ್ತವಿಕ ಸ್ಥಿತಿಯ ಪರಿಕಾಷ್ಠತೆಯ ಪ್ರಶ್ನೆಗಳಿಗೆ ಸೂಕ್ತ ಉದಾಹರಣೆಯಾಗಿದೆ.

ಕೆಳಜಾತಿಗಳಲ್ಲಿ ಯಾವ ನಾಯಕತ್ವ ಬೆಳೆಯಲು ಸಾಧ್ಯವಾಗುವುದಿಲ್ಲವೋ ಅಂತಹದ್ದನ್ನು ರಾಜಕೀಯವಾಗಿ ಸ್ಥಾನವನ್ನು ಮೀಸಲಿಡುವುದ್ದರಿಂದ ಒತ್ತಾಯಪೂರ್ವಕವಾಗಿ ಬೆಳೆಸಬಹುದೆಂಬುದು ಇವರ ಅಭಿಪ್ರಾಯವಾಗಿತ್ತು. ಶೈಕ್ಷಣಿಕವಾಗಿ ಅವಕಾಶಗಳನ್ನು ಕಲ್ಪಿಸಿಕೊಡುವುದೆಂದರೆ ಇಲ್ಲಿ ಎರಡು ಪ್ರಮುಖ ಉದ್ದೇಶಗಳನ್ನು ಕಾಣಬಹುದು. ಮೊದಲನೆಯದಾಗಿ ಯಾವ ಮನುಷ್ಯ ತನ್ನ ಕೀಳುಜಾತಿಯ ಭಾವನೆಯಿಂದ ಬಿಡಿಸಿಕೊಂಡು ಮೇಲಕ್ಕೆ ಬರಲು ಕಾತುರನಾಗಿರುತ್ತಾನೋ ಅವನಿಗೆ ಆತನ ಸಮಾಜದ ಬಗ್ಗೆ, ಆತನ ಬಗ್ಗೆ, ಖಚಿತವಾದ ನಿರ್ಧಾರಿತ ಸ್ಪಷ್ಟ ಅರಿವನ್ನುಂಟುಮಾಡಬಹುದು. ಎರಡನೆಯದಾಗಿ ಕೆಳಜಾತಿಯ ಜನತೆಗೆ ಯಾವ ಯಾವ ಅನುಭವಗಳು ಅವಕಾಶಗಳನ್ನು ಮುಚ್ಚಲಾಗಿದೆಯೋ ಅಂತಹ ಅವಕಾಶಗಳನ್ನು ಅನುಭವಗಳನ್ನು ಒತ್ತಾಯಪೂರ್ವಕವಾಗಿಯಾದರೂ ಅವರು ಪಡೆಯುವಂತೆ ಮಾಡುವುದರಿಂದಾಗಿ, ಆರ್ಥಿಕ ಸ್ಥಿರತೆ ಮತ್ತು ಭರವಸೆಯನ್ನುಂಟು ಮಾಡುವುದ್ದರಿಂದ ಸಮಾಜಿಕ ಸ್ಥಿತಿಗತಿಯನ್ನು ಪ್ರಗತಿಪೂರಕವಾಗಿ ಪ್ರೋತ್ಸಾಹಿಸಿದಂತಾಗುತ್ತದೆ. ಇಲ್ಲಿ ಅಂಬೇಡ್ಕರ್‌ರವರ ಆಶಾ ಭಾವನೆಯನ್ನು ಪರಾಮರ್ಶಿಸುವುದಾದರೆ ಶೈಕ್ಷಣಿಕ, ಆರ್ಥಿಕ, ರಾಜಕೀಯ, ಪ್ರಬುದ್ಧತೆಯನ್ನು ದಲಿತರ ಬದುಕಿನಲ್ಲಿ ಬೆಳೆಸುವುದಾದರೆ ಅವರಲ್ಲಿಯೂ, ತಾವು ಕೂಡ ಇನ್ನಿತರರಂತೆ ಸ್ಥಾನಮಾನವನ್ನು, ಜೀವನಶೈಲಿಯನ್ನು ಅಂತಸ್ತನ್ನು ರೂಪಿಸಿಕೊಳ್ಳಬಹುದೆಂಬ ಆಶಾಭಾವನೆಯನ್ನು ಮೂಡಿಸುವುದಂತಾಗುತ್ತದೆ. ಅಲ್ಲದೆ ರಾಷ್ಟ್ರೀಯ ಚಲನೆಯಲ್ಲಿ ಸಾಧನೆಗೈಯ್ಯುವ ನಿಟ್ಟಿನಲ್ಲಿ ಅವರು ಕೂಡ ಒಬ್ಬರಾಗಬಹುದಾಗಿತ್ತೇನೋ ಎನ್ನುವುದಾಗಿದೆ. ದಲಿತರ ಜೀವನ ಉತ್ತಮಗೊಳ್ಳುವುದಕ್ಕಾಗಿ ಸಂವಿಧಾನಾತ್ಮಕ ಅನುಕೂಲಗಳನ್ನು ಭರವಸೆಗಳನ್ನು ನೀಡುವುದರ ಹೊರತಾಗಿ ಅನ್ಯಮಾರ್ಗವೆ ಇಲ್ಲ. ಅಲ್ಲದೆ ಈ ಜನಾಂಗದ ಪ್ರಗತಿಯನ್ನೇನಾದರು ಕಾಣಬೇಕಾದರೆ ಶಾಶ್ವತ ದೀರ್ಘಕಾಲಿಕ ಯೋಜನೆಗಳೇ ಹೊರತು ಮತ್ತೀನ್ನೇನೋ ಸಾಧನ ಸವಲತ್ತುಗಳು ಆಶಾದಾಯಕವಾಗಲಾರವು ಎನ್ನುವುದು ಇವರ ಅಚಲ ನಂಬಿಕೆಯಾಗಿತ್ತು. ಇಷ್ಟೆ ಅಲ್ಲದೆ ದಲಿತ ಜನಾಂಗದಿಂದ ರೂಪಿತಗೊಂಡ ನಾಯಕರುಗಳು ತಮ್ಮ ಜನಾಂಗದ ಸಮಸ್ಯೆಗಳ ಜೊತೆ ತಮ್ಮನ್ನು ತಾವೇ ಗುರುತಿಸಿಕೊಳ್ಳಲಾರದ ಮನೋಭಾವನೆಯನ್ನು ಹೊಂದಿರುವುದರಿಂದಾಗಿ ಇವರ ಸಮಸ್ಯೆಗಳು ಬಿರುಗಾಳಿಗೆ ಸಿಕ್ಕ ತರಗೆಲೆಗಳಂತಾಗಿದೆ ಎನ್ನುವುದನ್ನು ಪದೇ ಪದೇ ವ್ಯಕ್ತಪಡಿಸುತ್ತಿದ್ದರು. ಯಾವ ಸಮಸ್ಯೆಗಳ ಜೊತೆ ಇಂತಹ ನಾಯಕರು ಗುರುತಿಸಿಕೊಳ್ಳಬೇಕಿತ್ತೋ ಅದನ್ನು ಬಿಟ್ಟು ಇನ್ನಿತರ

ವರ್ಗದವರ ನಾಯಕರುಗಳ ಜೊತೆ ತಮ್ಮನ್ನು ನಾಮಕವಸ್ಥೆಗಾದರೂ ಜೊತೆಗೂಡಿಕೊಂಡಿರಬೇಕೆನ್ನುವುದು ಸಮಸ್ಯೆಯ ದ್ವಿಗುಣಗೊಳ್ಳುವಿಕೆಯ ಮತ್ತು ಆದರ್ಶಗಳ ಗಾಳಿಗೋಪುರಗಳಿಗೆ ಮೂಲವೆಂದು ಅರಿತಿದ್ದರು.

ದಲಿತ ಜನಾಂಗದ ರಾಜಕಾರಣಿಗಳು ಒಂದು ವೇಳೆ ಅಧಿಕಾರ ಮತ್ತು ಪ್ರಭುತ್ವವನ್ನು ಹೊಂದಿರಲೇಬೇಕೆಂಬ ಪ್ರಬಲ ಆಶಯಗಳನ್ನು ಹೊಂದಿದ್ದರೂ ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳುವಲ್ಲಿ ಮತ್ತು ಸಮರ್ಥ ನಾಯಕನ ಹುಟ್ಟುಹಾಕುವಲ್ಲಿ ವಿಫಲರಾಗಿರುತ್ತಾರೆ. ಕಾರಣವೆಂದರೆ ಪ್ರತಿಬಾರಿಯೂ ಈ ಜನತೆಯ ಸದಸ್ಯರ ಪ್ರಾತಿನಿಧ್ಯದ ಸ್ಥಾನಮಾನವನ್ನು ಬದಲಿಸುತ್ತಲೇ ಹೋಗುವುದರಿಂದ ಇವರಲ್ಲಿ ಸಮರ್ಥ ನಾಯಕತ್ವದ ಕೊರತೆಯೂ ಕಾರಣವಾಯಿತೆನೋ ಎನ್ನುವುದು ಒಂದು ದೃಷ್ಟಿಯಾದರೆ, ಸ್ಥಾನಮಾನವನ್ನು ಗಳಿಸಿಕೊಂಡು ನಾಯಕರುಗಳಲ್ಲಿ ಸ್ವಾರ್ಥತತೆಯನ್ನು ನೇರವಾಗಿ ಹೊಂದಿರುವುದೇ ಕಾರಣವಾಯಿತು ಎಂದು ಅಂಬೇಡ್ಕರ್ ಭಾವಿಸಿದ್ದರು.

ಇದಕ್ಕೆ ಪೂರಕವಾಗಿಯೇ ಎನ್ನುವಂತೆ ಈ ಜನಾಂಗದ ಪ್ರಾತಿನಿಧ್ಯ ಹೊಂದಿದ ನಾಯಕರುಗಳು ತಮ್ಮ ಜನತೆಯ ಸಮಸ್ಯೆಗಳಿಗೆ ತಕ್ಕಂತೆ ಪರಿಹಾರ ಒದಗಿಸುವ ಜವಾಬ್ದಾರಿಯನ್ನು ಒಪ್ಪಿಕೊಳ್ಳುವುದೇ ಆಗಿದ್ದರೆ, ಸ್ವತಂತ್ರ್ಯ ಬಂದು 65 ವರ್ಷಗಳು ಕಳೆದಿದ್ದರೂ ಇವರ ಸಮಸ್ಯೆಗಳನ್ನು ತಿಳಿಯಲು ಮತ್ತು ಪರಿಹಾರಗಳನ್ನು ರೂಪಿಸಲು ಬೇರೆ ಬೇರೆಯದೆ ಆದ ಸಮಿತಿಗಳನ್ನು ಉಪಸಮಿತಿಗಳನ್ನು ನೇಮಿಸುವ ಅಗತ್ಯವಿರಲಿಲ್ಲವೇನೋ ಎನ್ನಿಸುವುದರಲ್ಲಿ ಎರಡು ಮಾತಿಲ್ಲ.

ಅಂಬೇಡ್ಕರ್‌ರವರು ಹಿಂದೂ ಸಮಾಜದಲ್ಲಿನ ಅಸಮಾನತೆಯ ಮೂಲವನ್ನು ಗುರುತಿಸುತ್ತಾ ಹಿಂದೂ ಸಾಮಾಜಿಕ ವ್ಯವಸ್ಥೆಯು ಶ್ರೇಣಿಕೃತವಾಗಿರುವುದರಿಂದ ನಾನಾ ರೀತಿಯ ಸಾಮಾಜಿಕ, ಆರ್ಥಿಕ, ಮತ್ತು ಕಾನೂನು ರೂಪದ ನಿಬಂಧನೆಗಳ ಮೂಲಕ ಉತ್ಪಾದನಾಂಗಗಳ ಅಸಮಾನ ಬೆಲೆ ನಿರ್ಣಯ ಕ್ರಮವು ಅಸ್ತಿತ್ವಕ್ಕೆ ಬಂದಿದ್ದು ಯಾವುದೇ ಉತ್ಪಾದನಾ ಕ್ರಿಯೆಯಲ್ಲಿ ತೊಡಗಿದ ದುಡಿಯುವ ವರ್ಗಕ್ಕೆ ಅರ್ಥಾತ್ ಶೂದ್ರ ಮತ್ತು ದಲಿತ ವರ್ಗಕ್ಕೆ ಅಲ್ಪ ಮೊತ್ತದ ಪ್ರತಿಫಲವನ್ನು ವರ್ಣ ಶ್ರೇಣಿಗನುಗುಣವಾಗಿ ಇತರರ ಪ್ರತಿಫಲವು ಹೆಚ್ಚಾಗುತ್ತಿದ್ದರಿಂದಾಗಿ ಅಸಮಾನತೆಯ ಮೂಲವು ಹುಟ್ಟಿಕೊಂಡಿತ್ತೆಂದು ಅಂಬೇಡ್ಕರ್ ಭಾವಿಸಿದ್ದರು.

ಶೂದ್ರರು ಮತ್ತು ದಲಿತ ವರ್ಗಗಳ ಮೇಲೆ ವಿಧಿಸಲಾಗುತ್ತಿದ್ದ ದಂಡಗಳು ಮತ್ತು ಶಿಕ್ಷೆಗಳ ಅಮಾನವೀಯವಾಗಿದ್ದು ಶೂದ್ರರ ದಲಿತರ ಜೀವನದಿಂದ ಸಂಪತ್ತಿನವರೆಗೆ ಮುಟ್ಟುಗೋಲನ್ನು ಹಾಕಿಕೊಳ್ಳಬಹುದಾಗಿದ್ದು, ಈ ದಂಡನೆಗಳು ದುಡಿಯುವ ವರ್ಗದ ಮೇಲೆ ಸಾಮಾಜಿಕ ಸಾಂಸ್ಕೃತಿಕ ಮತ್ತು ಆರ್ಥಿಕ ಅಪರಾಧಗಳಿಗೆ ಸಂಬಂಧಿಸಿದ್ದವಾದವು ಇಂತಹ ಬೇಧ–ಭಾವದಿಂದ ಕೂಡಿದ ಸಾಮಾಜಿಕ ವ್ಯವಸ್ಥೆ ಅಭಿವೃದ್ಧಿಯನ್ನು ಹೊಂದುವ ನಿಟ್ಟಿನಲ್ಲಿ ಸ್ಥಗಿತಗೊಂಡಿದ್ದವು ಎಂದು ಅಂಬೇಡ್ಕರ್ ಸೂಕ್ತವಾಗಿಯೇ ವಾದಿಸುತ್ತಿದ್ದರು. ನಿಕೃಷ್ಟವಾದ ವೃತ್ತಿಚಲನೆ ರಹಿತ ಸಮಾನತೆ ರಹಿತ ಸ್ವಾವಲಂಬನೆ ರಹಿತ ದೈನ್ಯತೆಯ ಜನರನ್ನು ಸಾಮಾಜಿಕ ವ್ಯವಸ್ಥೆ ಸೃಷ್ಟಿಸಿದ್ದು, ಪರಂಪರೆ ಶತಮಾನಗಳಾದಿಯಾಗಿ ನಡೆದುಬಂದು ಇಂದಿಗೂ ಮುಂದುವರೆಯುತ್ತಿದೆ. ದಟ್ಟ ದರಿದ್ರರನ್ನು ಒಳಗೊಂಡ ನಿರುದ್ಯೋಗ, ಅರೆನಿರುದ್ಯೋಗ, ಅರ್ಥಪೂರ್ಣ ಅಭಿವೃದ್ಧಿಗಳ ಕುರಿತ ವೈಜ್ಞಾನಿಕ ವಿಶ್ಲೇಷಣೆಯನ್ನು ನೀಡುವುದು ಅಂಬೇಡ್ಕರ್ ರಂತಹ ಕೆಲವೇ ಕೆಲವು ಅಗ್ರಗಣ್ಯ ನಾಯಕರುಗಳು ಮಾತ್ರ ಸಾಧ್ಯವಾಗಬಹುದಾಗಿತ್ತೇನೋ.

ದಲಿತ ಜನಾಂಗದ ಜೀವನ ಮೂಲಭೂತ ಅಗತ್ಯಗಳಾದ ಊಟ, ಬಟ್ಟೆ, ಉದ್ಯೋಗ, ವಸತಿಗಾಗಿ ದಿನ ದಿನವೂ ಪರಿತಪಿಸಬೇಕಾಗಿದ್ದು, 12ನೇ ಪಂಚವಾರ್ಷಿಕ ಯೋಜನೆಗೆ ಕಾಲಿಟ್ಟಿದ್ದರೂ ಸರ್ಕಾರ ನಿರ್ಧಿಷ್ಟ ದಿಟ್ಟ ಕ್ರಮಗಳನ್ನು ಕೈಗೊಳ್ಳಲಾಗದಿರುವುದು ದುರದೃಷ್ಟಕರ. ಯಾವುದೇ ರೀತಿಯ ಅನಗತ್ಯವಾದ ಬೆಳವಣಿಗೆಗಳು ನಾನಾ ರೀತಿಯ ಸಮಸ್ಯೆಗಳ ಉದ್ಬವಕ್ಕೆ ಕಾರಣೀಕರ್ತವಾಗುತ್ತದೆ. ಸಾಮಾಜಿಕ ಅಸಮಾನತೆಯನ್ನು ದಿನದಿಂದ ದಿನಕ್ಕೆ ಹೆಚ್ಚಿಸುತ್ತದೆ. 1972ರ ಸಾರ್ವತ್ರಿಕ ಚುನಾವಣೆಗಳ ನಂತರದಲ್ಲಿ ಹೆಚ್ಚು ಹೆಚ್ಚು ಸೃಷ್ಟಿಯಾದ ಜಾತಿ ಸಂಘಟನೆಗಳು ರಾಷ್ಟ್ರವ್ಯಾಪ್ತಿಯಾಗಿ ಪಸರಿಸಿಕೊಂಡಿವೆ. ಹೀಗಾಗಿ ಜಾತಿ ಸಂಘಟನೆಗಳ ಕ್ಷಿಪ್ರಬೆಳವಣಿಗೆ ಜಾತೀಯತೆಯ ಅಂದಾನುಕಾರವು ಭಾರತ ಜಾತ್ಯತೀತ ರಾಷ್ಟ್ರವೆನ್ನುವ ಕಲ್ಪನೆಗೆ ವಿರುದ್ಧವಾದುದೆಂಬ ಭಾವನೆ ಬರುವುದರಲ್ಲಿ ಸಂದೇಹವಿಲ್ಲ. ಪ್ರತಿಯೊಂದು ಜಾತೀಯು ಸರ್ಕಾರದಿಂದ ಸವಲತ್ತುಗಳನ್ನು ಪಡೆಯುವ ನಿಟ್ಟಿನಲ್ಲಿಯೇ ಸಾಗುತ್ತಿವೆಯೋ ಹೊರತು ಸಾಮೂಹಿಕ ಹಿತರಕ್ಷಣೆಗಲ್ಲ. ಇದರಡೆಯಲ್ಲಿಯೇ ಸರ್ಕಾರಗಳು ಅಸಮಾನತೆಯನ್ನು ಹೆಚ್ಚಿಸುತ್ತಿರುವ ತತ್ವಧಾರಿತವಲ್ಲದ ಕಾರ್ಯಕ್ರಮಗಳೇ ಸಾಕ್ಷಿಯಾಗಿದೆ. ವುಡ್‌ವರ್ಡ್ ಷಿಲ್ಸ್ ಹೇಳುವಂತೆ ಬುದ್ಧಿಜೀವಿ ಮಾತಿಗೆ ತಕ್ಕದಾದಂತಹ ಯಾವ ರೀತಿಯ ಬುದ್ಧಿಜೀವಿಗಳು ದಲಿತ ಜನಾಂಗದಲ್ಲಿ ಕಂಡರಿಯಲಾಗದೇ, ಬುದ್ಧಿಜೀವಿಗಳೆನ್ನುವವರು ಎಲ್ಲಿಂದಲೋ ತಮ್ಮಷ್ಟಕ್ಕೆ ತಾವು ಉದ್ಭವವಾಗಿ ಬರುವುದಿಲ್ಲ, ಇದರ ಹಿಂದೆ ಅಪಾರವಾದ ಶ್ರದ್ಧೆ ನಿಷ್ಠೆ ನಿಯಮಗಳಂತಹ ಪೂರ್ವನಿಯೋಜಿತವಾದ ಸಂಗತಿಗಳನ್ನು ಮೈಗೂಡಿಸಿಕೊಂಡಿರುವವರ ಅವಶ್ಯಕತೆ ಇದೆ. ಇಂತಹ ಕರ್ತವ್ಯ ನಿಷ್ಠ ನಾಯಕರ ಕೊರತೆ ಈ ಜನಾಂಗಗಳಲ್ಲಿ ಕಂಡುಬರುತ್ತದೆ. ದುರಾದೃಷ್ಟವಶಾತ್ ದಲಿತ ಜನಾಂಗದ ವಿದ್ಯಾವಂತರು ಬುದ್ಧಿಜೀವಿಗಳು ನೌಕರರು ಎಂದೂ ಶಕ್ತಿಯುತವಾದ ಒಂದು ಗುಂಪಾಗಿ ವರ್ಗವಾಗಿ ರೂಪಿತವಾಗುತ್ತಿಲ್ಲ. ಅಂಬೇಡ್ಕರ್‌ರವರ ದಿನಗಳಿಂದಲೂ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಈ ಜನತೆಯ ಅಭಿವೃದ್ಧಿಗಾಗಿ ನಾನಾ ರೀತಿಯ ಕಾರ್ಯಕ್ರಮಗಳನ್ನು ಜಾರಿಗೆ ತಂದಿವೆ. ಶೈಕ್ಷಣಿಕವಾಗಿ, ರಾಜಕೀಯವಾಗಿ ಸ್ವಲ್ಪ ಮಟ್ಟಿಗೆ ಪ್ರಗತಿಯನ್ನು ಕಾಣಬಹುದಾದರೂ ಅಪೇಕ್ಷೆಗೆ ತಕ್ಕಂತಹ ಬೆಳವಣಿಗೆ ಕಾಣಲಾಗಿಲ್ಲ.

ಮಹಾತ್ಮಗಾಂಧಿ ನೆಹರೂರವರಂತೆ ಅಂಬೇಡ್ಕರ್ ರವರ ಚಿಂತನೆ ಕ್ರಿಯೆ ಮತ್ತು ಕ್ರಮದಲ್ಲೂ ಸಾಮಾಜಿಕ ಚಿಂತನೆಗೆ, ಸಮಾನತೆಗೆ, ಸ್ವ–ಗೌರವಕ್ಕೆ, ಘನತೆಗೆ, ಮೌಲ್ಯಗಳು ಮಾತ್ರವೇ ಆಶಾದಾಯಕವೆಂಬ ನಂಬಿಕೆ ಡಾ.ಅಂಬೇಡ್ಕರ್‌ರವರದಾಗಿತ್ತು. ಇದಕ್ಕಾಗಿ ಶಿಕ್ಷಣ ಸಂಘಟನೆ ನಾಯಕತ್ವ ಮತ್ತು ಹೋರಾಟಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದರು. ಅಂಬೇಡ್ಕರ್‌ರವರು ಮಹಾನ್ ಮಾನವತಾವಾದಿಯೂ ಮತ್ತು ಮಹಾನ್ ಉದ್ಧಾರಕರು ಆಗಿದ್ದು 20ನೇ ಶತಮಾನದಲ್ಲಿ ಭಾರತ ಕಂಡ ಒಬ್ಬ ಮಹಾನ್ ಪುರುಷರಾಗಿದ್ದು, ಸಾಮಾಜಿಕ ಸಮಾನತೆಯನ್ನು ಆಚರಿಸುವುದರಲ್ಲಿ ಇವರ ಪ್ರತಿಪಾದನೆ ಎಚ್ಚರಿಕೆಯ ಘಂಟೆಯಾಗಲಿದೆ ಎಂದು ಭಾವಿಸಿದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು**


- Ambedkar, B. R. (2015). *The Untouchables: Who were They and Why They became Untouchables?* https://ci.nii.ac.jp/ncid/BA40922965
- Mukherjee, A. P. (2009). B. R. Ambedkar, John Dewey, and the Meaning of Democracy. *New Literary History*, *40*(2), 345–370.
- Sontakke Y.D *'Thoughts of Dr Babasaheb Ambedkar.* Samyak Prakashan,